> ಸುಳ್ಳುಸುದ್ದಿಯೆಂದರೆ 'ತಪ್ಪು' ಸುದ್ದಿಯಲ್ಲ. ಗಾಸಿಪ್ ಅಥವಾ ಗಾಳಿಮಾತು ಕೂಡ ಅಲ್ಲ. ಬದಲು ಉದ್ದೇಶಪೂರ್ವಕವಾಗಿ ಸುಳ್ಳು ಮಾಹಿತಿ–ಕಥೆಗಳನ್ನು ಸೃಷ್ಟಿಸಿ ಅವುಗಳನ್ನು ಮಾಧ್ಯಮಗಳಲ್ಲಿ, ಅಂತರ್ಜಾಲ ತಾಣಗಳಲ್ಲಿ ಹರಿಯಬಿಡುವುದು. ಇದನ್ನು 'ಹಳದಿ ಪತ್ರಿಕೋದ್ಯಮ' ಎಂದು ಕರೆಯಲಾಗುತ್ತದೆ.

ಬರಿಯ ಬಾಯಿಮಾತಿನ ಸುದ್ದಿ ಹರಡುವಿಕೆಯ ಬಾಯಿಯನ್ನು ಬಡಿದು ಸಮಾಜಕ್ಕೆ ಸುದ್ದಿ ನೀಡುವ ಜವಾಬ್ದಾರಿಯನ್ನು ಮಾಧ್ಯಮಗಳು ವಹಿಸಿಕೊಂಡಿದ್ದು 1439ರಲ್ಲಿ, ಮುದ್ರಣಯಂತ್ರ ಅನ್ವೇಷಿಸಿದ ನಂತರ. ಆಗ ಶುರುವಾದ ಸುದ್ದಿ ಮಾಧ್ಯಮದ ಉದ್ಯಮಕ್ಕೆ ಆ ಕಾಲದಲ್ಲಿ ಯಾವುದೇ ರೂಪುರೇಷೆಗಳಿರಲಿಲ್ಲ. ನೈತಿಕ ಹೊಣೆಗಾರಿಕೆ ಮತ್ತು ಕಾನೂನಿನ ಕಟ್ಟಲೆಗಳಿರಲಿಲ್ಲ. ಹಾಗಾಗಿ ಆಗಿನ ಕಾಲದಲ್ಲಿ ಏನನ್ನು ಬೇಕಾದರೂ ಮುದ್ರಿಸಬಹುದಿತ್ತು.

ಮೊದಲಿಗೆ ಮುದ್ರಣ ಮಾಧ್ಯಮ ರಾಜರ–ಆಡಳಿತಕಾರರ ಮಿತಿಯ ಕಾರ್ಯ ಮಾತ್ರವಾಗಿತ್ತು. ಆದರೆ ಬಹುಬೇಗ ಸಮಾಜದ ಅವಿಭಾಜ್ಯ ಅಂಗವಾಗಿ ಬೆಳೆಯಿತು. 1610ರಲ್ಲಿ ಗೆಲಿಲಿಯೋನ ಹತ್ಯೆ ನಡೆವ ವೇಳೆಗೆ 'ಸಾಕ್ಷಿ–ಆಧಾರ' ಕೇಳುವ ಮಟ್ಟಕ್ಕೆ ಜನರ ಅರಿವು ಬೆಳೆಯತೊಡಗಿತು. 17ನೇ ಶತಮಾನದ ಚರಿತ್ರಕಾರರು ತಮ್ಮ ಲೇಖನಗಳ ಕೊನೆಗೆ, 'ಆಧಾರಿತ ಲೇಖನ'ಗಳ ಹೆಸರುಗಳನ್ನು ಪಟ್ಟಿ ಮಾಡುವುದನ್ನು ಪ್ರಾರಂಭಿಸಿದರು. 18ನೇ ಶತಮಾನದಲ್ಲಿ ನೆದರ್‌ಲೆಂಡ್‌ನಲ್ಲಿ ಮೊದಲ ಬಾರಿಗೆ ಸುಳ್ಳುಸುದ್ದಿ ಪ್ರಕಟಿಸಿದ ಪತ್ರಕರ್ತರಿಗೆ ದಂಡವಿಧಿಸುವ ಕಾನೂನುಗಳು ಜಾರಿಗೆ ಬಂದವು. ಶಿಕ್ಷೆ ಲಘುವಾಗಿದ್ದ ಕಾರಣ ಅಮೆರಿಕದ 'ರೆಡ್ ಇಂಡಿಯನ್ಸ್' ಬಗ್ಗೆ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಿದ್ದ 'ಜೆರಾರ್ಡ್ ಲೋಡೊವಿಕ್ ವಾಂಡರ್ ಮಾಟ್' ಎಂಬಾತನನ್ನು ಸರ್ಕಾರ 4 ಬಾರಿ ಬಂಧಿಸಿತು. ಆತ ರೆಡ್ ಇಂಡಿಯನ್ಸ್ ಬುಡಕಟ್ಟು ಜನರು ನಡೆಸುತ್ತಿದ್ದ ಕ್ರಾಂತಿಯ ಬಗ್ಗೆ ಪದೇಪದೆ ಸುಳ್ಳುಸುದ್ದಿಗಳನ್ನು ಸೃಷ್ಟಿಸುತ್ತಿದ್ದ.



1990ರಲ್ಲಿ ಅಂತರ್ಜಾಲ ಶುರುವಾಯ್ತು. ಇದು 21ನೇ ಶತಮಾನದ ವೇಳೆಗೆ ಸುದ್ದಿ ಮಾಧ್ಯಮವನ್ನು ಆವರಿಸಿಕೊಂಡು, ಬಹು ಬೇಗನೆ ಜಗತ್ತನ್ನೂ ಆವರಿಸಿದೆ. ಜನಸಾಮಾನ್ಯರಿಗೆ ಅರಿವು, ಮನರಂಜನೆ, ಮಾಹಿತಿ ಮತ್ತು ಆಗುಹೋಗುಗಳನ್ನು ಹೇಳುವುದು ವೃತ್ತಿ, ಪ್ರವೃತ್ತಿ ಮತ್ತು ಬೃಹತ್ ಉದ್ಯಮವಾಗಿ ಬೆಳೆದಿರುವ ಈ ಕಾಲದಲ್ಲಿ ಅಂತರ್ಜಾಲ, ಸಾಮಾಜಿಕ ಜಾಲತಾಣಗಳಾದ ಟ್ವಿಟ್ಟರ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಸ್ನಾಪ್ ಚಾಟ್ ಇತ್ಯಾದಿಗಳು ಮತ್ತು ಸ್ಮಾರ್ಟ್‌ಫೋನ್‌ಗಳ ಆವಿಷ್ಕಾರ ಊಹಿಸಲಾಗದಷ್ಟು ಬದಲಾವಣೆಗಳನ್ನು ಕ್ರಾಂತಿಯನ್ನು, ಹೊಸತನ್ನು ಸೃಷ್ಟಿಸಿವೆ. ಅದರ ಜೊತೆ ಜೊತೆಗೆ ಸುಳ್ಳುಸುದ್ದಿಗಳು ವಿವಿಧ ರೂಪಗಳಲ್ಲಿ ಬೃಹತ್ ಗಾತ್ರಕ್ಕೆ ಬೆಳೆಯುತ್ತಿವೆ. ಭಾರತದಲ್ಲಿ ಇನ್ನಿಲ್ಲದಂತೆ ಜನಪ್ರಿಯವಾಗಿರುವ ವಾಟ್ಸ್‌ಆ್ಯಪ್ ತನ್ನದೇ ಸುದ್ದಿಗಳನ್ನು ಸೃಷ್ಟಿಸುವುದಿಲ್ಲ. ಆದರೆ, ಯಾರೂ ಬೇಕಾದರೂ ಸುದ್ದಿಗಳನ್ನು ಸೃಷ್ಟಿಸಿ ಸಂದೇಶಗಳ ಮೂಲಕ ಹರಿಯಬಿಡುವುದನ್ನು ಸಾಧ್ಯವಾಗಿಸಿದೆ. ಫೋಟೊ, ವಿಡಿಯೊ, ಪುಸ್ತಕಗಳನ್ನು ಜೊತೆಗೆ ಕಾಳ್ಗಿಚ್ಚಿನಂತೆ 'ಸುಳ್ಳುಸುದ್ದಿ'ಗಳನ್ನೂ ಹರಡಲು ವೇದಿಕೆಯಾಗಿ ಬೆಳೆದಿದೆ.

2017ರ ಫೆಬ್ರುವರಿಯಲ್ಲಿ ಭಾರತದಲ್ಲಿ ನಡೆದ ಸಮೀಕ್ಷೆಯ ಪ್ರಕಾರ ಸುಮಾರು 20 ಕೋಟಿ ಜನರು ವಾಟ್ಸ್‌ಆ್ಯಪ್ ಬಳಸುತ್ತಿದ್ದಾರೆ. ಇವರ ಸಂಖ್ಯೆ ದಿನೇದಿನೆ ಹೆಚ್ಚುತ್ತಲೇ ಇದೆ. ಅಂತರ್ಜಾಲ ತಾಣಕ್ಕೆ ನಾವು ಭೇಟಿ ನೀಡುವ ಪ್ರಯತ್ನ ಮಾಡಬೇಕಾಗುತ್ತದೆ. ಆದರೆ ಸ್ಮಾರ್ಟ್‌ಫೋನ್‌ಗಳಲ್ಲಿ ಹರಿದುಬರುವ ಸುದ್ದಿಗಳು ಜನರ ಪ್ರಯತ್ನವಿಲ್ಲದೇ ಅವರಿದ್ದಲ್ಲಿಗೇ ಹೋಗಿ ತಲುಪುತ್ತಿವೆ.

ಜನಸಾಮಾನ್ಯರಿಗೆ ನಿಜವನ್ನೂ ಸುಳ್ಳನ್ನೂ ಒಟ್ಟಿಗೆ ಕಳಿಸಿದರೆ, ಯಾವುದನ್ನು ಸ್ವೀಕರಿಸಬೇಕು ಯಾವುದನ್ನು ಬಿಡಬೇಕು ಎಂಬ ಬಗ್ಗೆ ಸಹಜವಾಗಿಯೇ ಗೊಂದಲ ಹುಟ್ಟುತ್ತದೆ. ಎರಡೂ ಕಥೆಗಳ ಬಿಕರಿಯಂತೂ ಆಗುತ್ತದೆ. ಆದರೆ ಯಾರು ಯಾವುದನ್ನು ಹೆಚ್ಚು ಕಾಲ, ಹೆಚ್ಚು ಜೋರಾಗಿ ಪ್ರಚಾರ ಮಾಡುತ್ತಾರೋ ಅದನ್ನೇ ನಂಬುವ ಅಪಾಯ ಪ್ರಪಂಚದಾದ್ಯಂತ ರೂಪುಗೊಂಡಿದೆ. ರಾಜಕೀಯ ಹುನ್ನಾರಗಳು ಮತ್ತು ವೈಯಕ್ತಿಕ ಪ್ರಚಾರಗಳಿಗಾಗಿ ಜನರು ಕೋಟ್ಯಂತರ ಹಣವನ್ನು 'ಸುಳ್ಳುಸುದ್ದಿ'ಗಳನ್ನು ಸೃಷ್ಟಿಸಲು ಪ್ರತಿದಿನ ವ್ಯಯಿಸುತ್ತಿದ್ದಾರೆ. ಹೀಗಾಗಿ, ಸುಳ್ಳುಸುದ್ದಿಗಳ ಪ್ರಚಾರದಲ್ಲಿ ಜನಸಾಮಾನ್ಯರು ಅರಿವಿಲ್ಲದೆಯೇ ಭಾಗಿಗಳಾಗುತ್ತಿದ್ದಾರೆ.

ಜನರಿಗೆ ಸುಳ್ಳುಸುದ್ದಿಗಳನ್ನು ತಲುಪಿಸಿ ಹಣ ಮಾಡುವುದು ನಿಜವಾದ ಸುದ್ದಿಗಳ ಪ್ರಚಾರಕ್ಕಿಂತ ಹೆಚ್ಚು ಲಾಭದಾಯಕವಾಗಿದೆ. ಇದರ ಅಬ್ಬರ ಅದೆಷ್ಟಿದೆಯೆಂದರೆ, ನಿಜವಾದ ಸುದ್ದಿಗಳು ಮೂಲೆಗುಂಪಾಗುವ ಪರಿಸ್ಥಿತಿ ಉಂಟಾಗಿ ಸುದ್ದಿ ಮಾಧ್ಯಮಗಳ ನೈತಿಕ ನಿಷ್ಠೆ ಅಖಂಡವಾಗಿ ಖಂಡನೆಗೊಳಗಾಗುತ್ತಿರುವ ಕಾಲವಿದು.

ಅಮೆರಿಕದ ನಾರ್ತ್ ವೆಸ್ಟರ್ನ್ ವಿಶ್ವವಿದ್ಯಾಲಯ ನಡೆಸಿದ ಸಮೀಕ್ಷೆಯೊಂದರ ಪ್ರಕಾರ ಫೇಸ್‌ಬುಕ್ ಶೇ. 30 ಸುಳ್ಳುಸುದ್ದಿಗಳ ಹರಿಕಾರ. ಆ ಜಾಲತಾಣದ ನಿರ್ವಾಹಕ ಮಾರ್ಕ್ ಜುಕರ್‌ಬರ್ಗ್ ಮಿಲಿಯಗಟ್ಟಲೆ ಹಣ ಸುರಿದು ಹಲವು ಸೂಕ್ಷ್ಮ ವಿಚಾರಗಳನ್ನು ಮತ್ತು ಸುಳ್ಳು ಮಾಹಿತಿಗಳನ್ನು ಜಾಲತಾಣದಿಂದ ನಿವಾರಿಸಲು ಪ್ರಯತ್ನಿಸಿದ. ಆದರೆ, ಸುಳ್ಳುಸುದ್ದಿಗಳನ್ನು ಯಾರು ಸೃಷ್ಟಿಸುತ್ತಾರೆ ಎನ್ನುವುದನ್ನು ಕಂಡುಹಿಡಿಯುವುದು ಸುಲಭವಲ್ಲ. ಅವರನ್ನು ಶಿಕ್ಷಿಸಲು ಎಲ್ಲ ದೇಶಗಳಲ್ಲಿ ಕಾನೂನುಗಳು ಜಾರಿಯಲ್ಲಿಲ್ಲ. ಭಾರತ ಕೂಡ ಕಾನೂನಿಗೆ ಕೊರತೆಗಳಿರುವ ದೇಶಗಳಲ್ಲಿ ಒಂದು.

ಸುಳ್ಳುಸುದ್ದಿಗಳು ಇತ್ತೀಚೆಗೆ ಭಾರೀ ಕೋಲಾಹಲವನ್ನು ಹುಟ್ಟುಹಾಕಿದ್ದು ಅಮೆರಿಕದ ಅಧ್ಯಕ್ಷ ಟ್ರಂಪ್ ತನಗೆ ವ್ಯತಿರಿಕ್ತವಾಗಿ ಹೊರಬಂದ ಎಲ್ಲ ಸುದ್ದಿಗಳನ್ನು 'ಸುಳ್ಳುಸುದ್ದಿ'ಗಳೆಂದು ಹಳಿದದ್ದು ಮಾತ್ರವಲ್ಲದೆ, ಮುಖ್ಯವಾಹಿನಿ ಮಾಧ್ಯಮಗಳನ್ನು ಪದೇಪದೆ ಸಾರ್ವಜನಿಕವಾಗಿ ಖಂಡಿಸಿದರು. ಕೊನೆಗೆ 'ಸುಳ್ಳುಸುದ್ದಿ' ಎನ್ನುವ ಪದವನ್ನು ಸೃಷ್ಟಿಸಿದ್ದೇ ತಾನೆಂದು ಟ್ವೀಟ್ ಮಾಡಿ ಹೊಸದೊಂದು ಸುಳ್ಳುಸುದ್ದಿಯ ಹರಿಕಾರನಾಗಿದ್ದು ನಿಜ. ಯಾಕೆಂದರೆ ಸುಳ್ಳು